"ಏನಿಲ್ಲ ಸಾರ್, ಬೀಗ್ರು ಸ್ವಲ್ಪ ಡಿಮ್ಯಾಂಡಲ್ಲಿದ್ದಾರೆ. ಹುಡುಗ ಅಮೆರಿಕ... ಸಾಫ್ಟ್‌ವೇರ್ ಅನ್ನೋ ಅಹಂಕಾರ ಅವರ ತಲೇಲಿ, ಜಯನಗರದಲ್ಲೇ ಛತ್ರ, ಇಂಥದ್ದೆ ಅಡಿಗೆಯವ್ರು, ಅವರೆಲ್ಲ ಹೋಗಿ ಬರೋಕ್ಕೆ ಕಾರುಗಳು... ಇಳಕೊಳ್ಳಕ್ಕೆ ರೂಮುಗಳು... ಇನ್ನೇನ್ಮಾಡ್ಲಿ ಸಾರ್? ಇರೋದು ಇವಳೊಬ್ಬೆ ಮಗಳು. ತಪ್ಪು ತಿಳಕೋಬೇಡಿ. ಅವಳು ನಂಗೂ ಮಗಳೇನೆ. ಒಳ್ಳೆ ಕಡೆ ಅಂತ ನಾನೂ ಹಿಂದು ಮುಂದು ನೋಡದೆ ಕೈ ಬಿಟ್ಟು ಖರ್ಚು ಮಾಡ್ತಿದ್ದೀನಿ. ಏನಂದ್ರೂ ನನ್ನ ಕೈಲಿ ತೂಗಸಕ್ಕೆ ಆಗೋಂಥದ್ದು ಅಲ್ಲ ಇದು. ಸಾಲ ಸೋಲ ಮಾಡಿ ಒಂದು ಹತ್ತು ಲಕ್ಷ ಹೊಂದಿಸಿದ್ದೀನಿ, ಇನ್ನೂ ಐದಾರು ಲಕ್ಷ ಬೇಕಾಗುತ್ತಲ್ಲ... ಇನ್ಯಾರನ್ನ ಕೇಳ್ಲಿ ಹೇಳಿ? ನಿಮ್ಮನ್ನೇ ಒಂದು ಮಾತು ಕೇಳಣ ಅಂತ ಬಂದೆ. ಎಷ್ಟಾಗ್ಲಿ ಅವ್ಳು ನಿಮ್ಮ ಮಗಳಲ್ವಾ" ಕಡೆಯ ಬಾಣವನ್ನು ಕರಾರುವಾಕ್ಕಾಗಿ ಆಯಕಟ್ಟಿನ ಸ್ಥಳಕ್ಕೆ ಹೊಡೆದಿದ್ದ!

ನನಗಾಗದರೂ ಏನಾಗಬೇಕಿತ್ತು? ನನ್ನ ಹಣ ನನ್ನ ಮಗಳ ಮದುವೆಗಲ್ಲದೆ ಇನ್ಯಾತಕ್ಕೆ ಎನಿಸಿಬಿಟ್ಟಿತು. "ಸರಿ. ಮದುವೆ ಯಾವಾಗ?" ಎಂದೆ ಸಹಜವಾಗೆಂಬಂತೆ. "ಇನ್ನೂ ನಾಕು ತಿಂಗಳಿದೆ" ಎಂದ ವಿನೀತನಾಗಿ. "ಎಷ್ಟು ಬೇಕಾಗುತ್ತೆ? ಒಂದೈದು ಲಕ್ಷ ಕೊಡಾಲಾ?" ಎಂದಾಗ "ಐದಾ... ಸ್ವಲ್ಪ ಕಡಿಮೆ ಬರುತ್ತೆ. ಎಂಟು ಲಕ್ಷ ಕೊಟ್ಟಿಡಿ ಸಾರ್. ಎಲ್ಲಾದಕ್ಕೂ ಸರಿ ಮಾಡಿಕೋತೀನಿ" ಎಂದವನು ಮರುಕ್ಷಣದಲ್ಲಿ, "ಆದ್ರೆ ಸಾರ್... ದಯವಿಟ್ಟು ಇದನ್ನು ಸುಶೀಲಂಗೆ ಹೇಳ್ಬೇಡಿ. ಅವಳು ತುಂಬಾ ಸ್ವಾಭಿಮಾನಿ. ನಿಮ್ಹತ್ರ ದುಡ್ಡು ತಗೊಳೋಕೆ ಅವಳಿಗಿಷ್ಟವಿಲ್ಲ. ನಾನು ಬಂದು ಕೇಳಿದ್ದು ಅವಳಿಗೆ ಗೊತ್ತಾದ್ರೂ ದೊಡ್ಡ ರಂಪ ಆಗಿಬಿಡುತ್ತೆ. ದೇವರಾಣೆಗೂ ನಾನು ಸುಳ್ಳೇಳ್ತಿಲ್ಲ ಸಾರ್. ಪ್ರಫುಲ್ಲ ಮದ್ವೇನ ಚೆನ್ನಾಗಿ ಮಾಡಬೇಕಂತ ಆಸೆಗೆ ನಾನು ನಿಮ್ಮ ಹತ್ರ ಬಂದೆ ಅಷ್ಟೆ ಅದ್ರಲ್ಲಿ ನಂಗೆ ಒಂದ್ರುಪಾಯೂ ಬೇಡ" ಎಂದ.

"ಸರಿ ಸರಿ ನಾನೇನು ಅವಳಿಗೆ ಹೇಳಲ್ಲ. ನಮ್ಮ ಪಾಪು ಮದುವೇನಾ ಚೆನ್ನಾಗಿ ಮಾಡು. ಏನೂ ಕೊರತೆಯಾಗದ ಹಾಗೆ, ತಡಿ" ಎಂದು ಒಳಹೋಗಿ ಅಮ್ಮನದಾಗಿ ಉಳಿದಿದ್ದ ಒಂದೆರೆಡು ಒಡವೆಗಳನ್ನು ಕೊಟ್ಟು, "ಇದನ್ನು ಪಾಪೂಗೆ ಕೊಟ್ಟುಬಿಡು. ನಾನು ಕೊಟ್ಟೇಂತ ಹೇಳು. ಹಂಗೇ ನಿನ್ನ ಅಕೌಂಟ್ ನಂಬರ್ ಕೊಟ್ಟು ಹೋಗು ಎಫ್.ಡಿ ಕ್ಯಾನ್ಸಲ್ ಮಾಡಿ ಹಣ ತೆಗೆದು ನಿನ್ನ ಅಕೌಂಟಿಗೆ ಹಾಕ್ತೀನಿ" ಎಂದೆ.

"ಹಂಗೇ ಮಾಡಿ ಸಾರ್, ನಿಮ್ಮಿಂದ ತುಂಬ ಉಪಕಾರವಾಯ್ತು" ಎಂದು ಹೇಳಿ ಅಲ್ಲೇ ಟೀಪಾಯಿಯ ಮೇಲಿದ್ದ ಬಿಳಿ ಹಾಳೆಯಲ್ಲಿ ಅವನ ಬ್ಯಾಂಕಿನ ವಿವರಗಳನ್ನು ಬರೆದು ಭಯ ಭಕ್ತಿಯಿಂದ ನನ್ನ ಕೈಗಿರಿಸಿದ್ದ! ನನ್ನದು ದಡ್ಡತನವೋ, ವ್ಯಾಮೋಹವೋ... ಯಾವುದನ್ನು ನಾನಾಗ ಯೋಚಿಸಿರಲಿಲ್ಲ.

ಪಾಪುವಿನ ಮದುವೆಯ ಪತ್ರಿಕೆ ಬಂದಾಗ ನಾನು ವಿಚಲಿತನಾಗಿದ್ದೆ. ಶ್ರೀಮತಿ ಸುಶೀಲ ಮತ್ತು ಶ್ರೀ ವಿಠ್ಠಲರಾವ್ ನಮ್ಮ ಸುಪುತ್ರಿ ಪ್ರಫುಲ್ಲಾಳ ವಿವಾಹಕ್ಕೆ...

ಮೈಮೇಲೆ ಮುಳ್ಳುಗಳೆದ್ದಿತ್ತು. ಅವನು ಇವಳ ಮಿಂಡನಿರಬಹುದು. ನನ್ನ ಮಗಳ ತಂದೆ ಹೇಗಾದಾನು? ನನ್ನ ಹಳೆ ಎಕ್ಕಡ ತಗೊಂಡು ಅವನನ್ನು ಕಂಬಕ್ಕೆ ಕಟ್ಟಿ ಮನಸ್ಸಿಗೆ ಬರುವಷ್ಟು ಹೊತ್ತು ಹೊಡೆಯಬೇಕಿನಿಸಿತು. ಆದರೆ... ನಾನು ಏನು ಮಾಡಲಾರದವ. ನನ್ನ ಗೆಳೆಯರೆಲ್ಲರು ಸಾರ್ವತ್ರಿಕವಾಗಿ ತೀರ್ಮಾನಿಸಿ "ನೀನಿಂಥ ನಾಮರ್ದನಾಗಿರೋ ಹೊತ್ಗೆ ಆ ತೊಟ್ಟಿಮುಂಡೆ ನಿನ್ಗೀ ಗತಿತಂದಿಟ್ಟಿರೋದು. ಒಬ್ಬ ಗಂಡಸು ಬಿಗಿಯಾಗಿ ಇರಬೇಕಾದಾಗ ಖಡಕ್ಕಾಗಿದ್ರೆ ಹೆಂಗಸ್ರು ಗಾಂಚಾಲಿ ತೆಗ್ಯಲ್ಲ. ಮುಚ್ಕಂಡು ಬಿದ್ದಿರ್ತಾರೆ" ಎಂದಿದ್ದರು. ನಿಜವೇ ಇರಬಹುದು.